## 1966 ಮಂತ್ರಾಕ್ಷತೆ

ಇದು ಒಂದು ರೀತಿಯಲ್ಲಿ ಕುವೆಂಪು ಅವರ ಹನಿಗವನಗಳ ಸಂಕಲನ ಎನ್ನಬಹುದು. ಆದರೆ ಹನಿಗವನದ ವ್ಯಾಪ್ತಿಯನ್ನೂ ಮೀರಿದ ಗಂಭಿರ ರಚನೆಗಳು ಇಲ್ಲಿವೆ. ಕವಿ ಲಹರಿ ಬಂದಾಗ, ಪುಸ್ತಕದ ಪುಟಗಳಲ್ಲೊ, ದಿನಚರಿಯ ತುದಿಯಲ್ಲೊ, ವೃತ್ತಪತ್ರಿಕೆಗಳ ಮೇಲೊ ಗುರುತು ಬರೆದುಕೊಂಡಿದ್ದ ಸುಮಾರು 169 ಹನಿಗವಿತೆಗಳನ್ನು ಸಂಗ್ರಹಿಸಿ ಈ ಸಂಕಲನವನ್ನು ಸಿದ್ಧಪಡಿಸಲಾಗಿದೆ. ಕೆಲವಕ್ಕೆ ಶಿರ್ಷಿಕೆಯಿದ್ದರೆ, ಹೆಚ್ಚಿನವಕ್ಕೆ ಶಿರ್ಷಿಕೆ ಕೂಡಾ ಇಲ್ಲ! ದ್ವಿಪದಿಗಳಿಂದ ಹಿಡಿದು ಬಹುಪದಿ ಹನಿಗವಿತೆಗಳು ಇಲ್ಲಿವೆ. ಮಂತ್ರಾಕ್ಷತೆಯ ಮೊದಲ ಕವಿತೆ 'ಮಂತ್ರಾಕ್ಷತೆ'ಯ ಅಡಿಟಿಪ್ಪಣಿಯಲ್ಲಿ "ಸಾಧಕ ಕವಿ ಅಧಿಕಾರದ ಕರ್ತವ್ಯನಿರ್ವಹಣೆಯ ಕಾಲದಲ್ಲಿ ಮತ್ತೆ ಮತ್ತೆ ವೇಗವಾಹನಗಳಲ್ಲಿ ಸಂಚರಿಸಬೇಕಾಗಿ ಬಂದಾಗ ಇಂತು ತನ್ನ ಸಾಧನೆಯನ್ನು ಮುಂದುವರೆಸುತ್ತಾನೆ. ಹಗಲೂ ಇರುಳೂ ಸಂಚಲಿಸುವ ನಾನಾ ದೃಶ್ಯಗಳ ಮಧ್ಯೆ ಭಗವದ್ದರ್ಶನ ಅನುಸಂಧಾನ ನಡೆಯುತ್ತಿದೆ" ಎಂದಿದ್ದಾರೆ. ಅದರಂತೆ, ಬದುಕಿನ ನಿರಂತರತೆಯ ನಡುವಿನ ಇಲ್ಲಿನ ಕಿರುಗವಿತೆಗಳಲ್ಲೂ ದರ್ಶನವನ್ನು ಕಾಣಬಹುದು, ಆನಂದಿಸಬಹುದು! ದೇವರಿಗೆ ಅರ್ಪಿತವಾದ ಬಿಡಿ ಹೂವುಗಳಂತೆ!

**ಸಂದೇಹಿಯ ಪ್ರಾರ್ಥನೆ**

ಓ ದೇವರೆ, ನೀನಿದ್ದರೆ,
ನನ್ನಾತ್ಮವನದು ಇದ್ದರೆ,
ಸಂರಕ್ಷಿಸು, ಬಲವಿದ್ದರೆ!
ಪ್ರಾರ್ಥನೆಯಿದು
ನಿನಗೆ,
ಸಂದೇಹವೆ ಆರಾಧನೆ

**ಮುತ್ತಿನ ಮುಗುಳು**

ಅಂತರದ ತುಟಿಯಲಿ ಅನಂತವೊತ್ತಿರ್ದ
ಮುತ್ತಿನ ಮುಗುಳ್ನಾನು!

**ಮಠಾಧಿಪತಿ**

ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ
ಕಳ್ಳನೊಬ್ಬನನು ಗುರುವನು ಮಾಡಿ
ಬಡವರ ಹೊನ್ನನು ಕಾಣಿಕೆ ನೀಡಿ
ಧರ್ಮವ ಮರೆವರ ನೋಡಯ್ಯ!

**ಲೋಕಕ್ಕೆ ಕವಿಯ ಪ್ರಾರ್ಥನೆ**

ಹೊಟ್ಟೆಗಿಷ್ಟು ಹಿಟ್ಟು ಕೊಡಿ;
ನನ್ನ ನನಗೆ ಬಿಟ್ಟು ಬಿಡಿ.
ಹಾಡೆ, ಕೇಳಿ, ಹರುಷಪಡಿ;
ಇಷ್ಟೆ ಕವಿಯ ಪ್ರಾರ್ಥನೆ.

ಮಾತು ನನ್ನ ಕಲೆ,
ಮೌನ ನನ್ನ ನೆಲೆ,

ಕವಿಗೆ ಕರ್ಣಂ ಪ್ರಮಾಣಂ
ವ್ಯಾಕರಣಮಲ್ತು;
ವ್ಯಾಕರಣಮೇಕೆಂಬೆಯೇಂ?
ಮರೆವುದಕೆ ಕಲ್ತು!

ಪ್ರೇಮವೆ ಶಿವ ಶಿವನೇ ಪ್ರೇಮ;
ಪ್ರೀತಿಸುವುದೆ ಪ್ರಾಣದ ನೇಮ!

**ವೀಣಾ ವಿಶಾರದೆಗೆ**

ಗಾನಮಧು ತುಂಬಿ ಸಿಡಿಯುವ ತಂತಿ ಮಿಡಿಯಲ್ಕೆ
ಹಾತೊರೆವ ವಲ್ಲಕೀ ವಧುವಿನಂತೆ
ನೀನೆಸೆವುದನು ನೋಡಿ ಕಾತರಿಪ ಕವಿಯೆನಗೆ
ವೈಣಿಕನದಾರೆಂಬುದೊಂದೆ ಚಿಂತೆ!

ಕುಂಡದಲ್ಲಿ ಕಾವ್ಯ:
ಅಃ ಎನಿತು ಶ್ರಾವ್ಯ!
ದೇವನೊಂದು ದಿವ್ಯ ಕವನ
ಅವತರಣಕೆ ಈ ಭುವನ
ಬಿತ್ತಿ ಮಾತ್ರ!
ಅದನರಿಯಲೆ ಅದ ಸವಿಯಲೆ
ಕವಿಯ ಪಾತ್ರ:
ಕವಿಯೆ ಪಾತ್ರ!

ಏಕತಾ ಅನೇಕದಿಂ
ಅನೇಕತಾ ಏಕಕೆ
ಧ್ಯೇಯಮೇಕಮಾತ್ರಮಲ್ತೆ
ವಿಕಾಸ ಶೀಲ ಲೋಕಕೆ!

ತಂಗಿಯ ಮನೆ: ಏನು ತಂಪು!
ಹೆಸರು ಏನೊ: ಕೊಳ್ಳಿಬೈಲು!
ಆದರೂ
ಮನಗೆ ಮೈಗೆ ಜೀವಕೆಲ್ಲ,
ನಡುಹಗಲಲಿ ಸುಡುಬಿಸಿಲಲಿ
ಹೊಂಗೆಯ ನೆರಳೆಂತೊ ಅಂತೆ,
ತಂಗಿಯ ಮನೆ — ತಂಪು!